ಬಂದರೆ ಮಾತ್ರವೇ ಚಾಟರ್ ಬಾಕ್ಸ್'' ನಕ್ಕಳು. ನಾನು ನಗಲಿಲ್ಲ.

"ಆರ್ ಯು ಆಲ್ ರೈಟ್? ಸಂ ಥಿಂಗ್ ರಾಂಗ್?"

ಕ್ಷಣಮಾತ್ರದಲ್ಲಿ ನನ್ನನ್ನು ಅಳೆದಿದ್ದಳು. "ವರ್ಷಿ, ನರೋತ್ತಮ್ ಹೋಗ್ಬಿಟ್ರು'' ಅಂಗೈಯಲ್ಲಿ ಮುಖಮುಚ್ಚಿಕೊಂಡು ನನ್ನ ದುಃಖವನ್ನೆಲ್ಲ ಹೊರಹಾಕಿದೆ. ಸ್ವಲ್ಪ ನಿರಾಳವೆನಿಸಿತು.

ಈಗ ವರ್ಷ, ಮ್ಲಾನವದನೆ ನನಗೆ ಹೇಗೆ ಸಮಾಧಾನ ಮಾಡಬೇಕೋ ತಿಳಿಯದೆ ತಿಣುಕಾಡುತ್ತಲೇ ಕಣ್ಣೊರೆಸಿಕೊಂಡಳು.

"ವರ್ಷಿ, ನಾನು ವಿಧವೇನಾ? ವಾಟ್ ಈಸ್ ಮೈ ಸ್ಟೇಟಸ್ ನೌ" ಗದ್ಗದಿತಳಾಗಿದ್ದೆ.

"ಸುಕೇಶಿ ಮನೆಗೆ ಬರೋಕ್ಕೆ ಸಂಕೋಚ.'' ವರ್ಷ ಉತ್ತರಿಸಲಿಲ್ಲ.

★★★

ಸಂಜೆ ಮಾರ್ಕೆಟ್ಟಿಗೆ ಹೋದಾಗ ಒಂದಷ್ಟು ಹೂವು ಹಣ್ಣು ತಂದೆವು. ಮಲಗುವವರೆಗೂ ಮನೆಯ ಗಾಸಿಪ್‌ನಿಂದ ಹಿಡಿದು ಟೀವಿ ಧಾರಾವಾಹಿ, ರಿಯಾಲಿಟಿ ಶೋಗಳು, ದೇಶವಿದೇಶದ ಸುದ್ದಿ, ನಮ್ಮ ಬಾಲ್ಯ, ಕಾಲೇಜು ದಿನಗಳು ಎಲ್ಲವನ್ನೂ ಮುಟ್ಟಿ ನಿದ್ದೆಮಾಡುವಾಗ ಹನ್ನೊಂದಾಗಿತ್ತು.

★★★

ಸುಕೇಶಿನಿ, ತಿಂಡಿಗೆ ಅಲ್ಲಿಗೆ ಬರಲು ಮತ್ತೆ ನೆನಪಿಸಿದ್ದರಿಂದ ಅಡುಗೆ ಮನೆಯಲ್ಲಿ ಹೆಚ್ಚು ಕೆಲಸವಿಲ್ಲ. "ಇಳಾ, ಬಾ ಕೂತ್ಕೋ'' ದೇವರ ದೀಪ ಹಚ್ಚಿ ಬರುತ್ತಲೇ ವರ್ಷ ಆದೇಶಿಸಿದಾಗ ಹಾಗೇ ಮಾಡಿದೆ. "ನಿನ್ನೆಯೇ ಕೊಡಬೇಕು ಅಂದ್ಕೊಂಡೆ ಆದರೆ ಈಗ ಸರಿಯಾದ ಸಮಯ" ಎಂದು ತೆರೆದ ರಟ್ಟಿನ ಪೆಟ್ಟಿಯಲ್ಲಿ ನನಗಿಷ್ಟದ ಮೆರೂನ್ ಬಣ್ಣದ ಕಾಂಚೀವರಂ ಸೀರೆಯನ್ನು ಹೊದಿಸಿದಳು, ಜೊತೆಗೆ ಹೂವು ಹಣ್ಣು.

"ಸೀರೆ ರೆಡಿ ಮಾಡಿ ತಂದಿದ್ದೀನಿ, ರೆಡಿಮೇಡ್ ಕುಪ್ಪಸವನ್ನೂ ಇಟ್ಟಿದ್ದೀನಿ. ನಾನೂ ಇದೇ ಬಣ್ಣದ್ದು ತೊಗೊಂಡೆ, ಇಬ್ಬರೂ ಉಡೋಣ" ಎಂದಾಗ ಭಾವೋದ್ವೇಗಕ್ಕೊಳಗಾಗಿ ಅವಳ ಭುಜಕ್ಕೆ ತಲೆಯಿಟ್ಟು ಬಿಕ್ಕಿದೆ.

"ನೀನು ಯಾವತ್ತಿದ್ದರೂ ಅದೇ ಇಳಾ ನರೋತ್ತಮ್...''

ಒಂದೈದು ನಿಮಿಷದ ನಂತರ ಸಾವರಿಸಿಕೊಂಡೆ.

ಅವಳು ಹೇಳಿದ್ದು ನಿಜ, ನನ್ನ ಗುರುತು ಅದೇ.

ಅವರು ಭೌತಿಕವಾಗಿ ಇದ್ದಾಗಲೂ, ಇರದಾಗಲೂ...

ಡ್ರೆಸ್ಸಿಂಗ್ ಟೇಬಲ್ ಮೇಲಿದ್ದ ಫೋಟೊ ನೋಡಿದೆ. ನರೋತ್ತಮ್ ಮೆಚ್ಚುಗೆಯಿಂದ ನಕ್ಕಂತಾಯ್ತು.

**ಕೆ.ವಿ. ರಾಜಲಕ್ಷ್ಮಿ**

ಎಂ.ಕಾಂ., ಎಲ್.ಎಲ್.ಬಿ. ಪದವೀಧರೆ. ದೂರ ಸಂಪರ್ಕ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ಲೆಕ್ಕಾಧಿಕಾರಿಯಾಗಿ ನಿವೃತ್ತರು. ಪ್ರಸ್ತುತ ವಕೀಲ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 200ಕ್ಕೂ ಹೆಚ್ಚು ಕತೆ, ಹಾಸ್ಯ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.